# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಾಸರಹಳ್ಳಿ ವಲಯ, ಹೆಗ್ಗನಹಳ್ಳಿ ಉಪವಿಭಾಗ

### ವಾರ್ಡ್ ನಂ.70 :ರಾಜಗೋಪಾಲನಗರ

**ದಿನಾಂಕ: 02.01.2021 ರಂದು ಮಧ್ಯಾಹ್ನ 3.00 ಗಂಟೆಗೆ ಶ್ರೀಮತಿ ಕಮಲ ಹೆಚ್ ನೋಡಲ್ ಅಧಿಕಾರಿ, ವಾರ್ಡ್ 70ರವರ ಅಧ್ಯಕ್ಷತೆಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಗ್ಗನಹಳ್ಳಿ ಉಪವಿಭಾಗ ಕಛೇರಿಯಲ್ಲಿ ನಡೆದ ಸಭೆಯ ನಡಾವಳಿಗಳು:**

**ಸಭೆಯಲ್ಲಿ ಹಾಜರಿದ್ದವರು:**

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಶ್ರೀಮತಿ ಕಮಲ ಹೆಚ್ | ನೋಡಲ್ಅಧಿಕಾರಿ–ವಾರ್ಡ್ ನಂ.70 |
| 2 | ಶ್ರೀ ಹೇಮಂತ್ಕುಮಾರ್ಎಸ್ ಕೆ | ಸಹಾಯಕ ಅಭಿಯಂತರರು, ಕಾರ್ಯದರ್ಶಿ ಹಾಗೂ ಸಂಚಾಲಕರು–ವಾರ್ಡ್ 70 |
| 3 | ಶಿವಲಿಂಗಯ್ಯ.ಕೆ | ಹಿರಿಯಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.70 |
| 4 | ತ್ರಿವೇಣಿ | ಕಿರಿಯಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.70 |
| 5 | ನಾಗೇಂದ್ರ | ಕಂದಾಯ ಪರಿವೀಕ್ಷಕರು |
| 6 | ಪುಟ್ಟೇಗೌಡ | ಕಂದಾಯ ಮೌಲ್ಯಮಾಪಕರು |
| 7 | ಗಿರೀಶ್ | ಗುತ್ತಿಗೆದಾರರು, ಬೀದಿದೀಪಗಳ ನಿರ್ವಹಣೆ |
| 8 | ಹಸನಸಾಬಾ ವಂಜಾರ | ಆರಕ್ಷಕ ಇಲಾಖಾ ಸಿಬ್ಬಂದಿ |

**:ನಡಾವಳಿಯ ವರದಿ:**

ಸದಸ್ಯ ಕಾರ್ಯದರ್ಶಿಗಳಾದ ಶ್ರೀ ಹೇಮಂತ್ಕುಮಾರ್ಎಸ್ ಕೆ ಮಾತನಾಡುತ್ತಾ ಸಭೆಗೆ ಹಾಜರಾದ ನೋಡಲ್ಅಧಿಕಾರಿ ಹಾಗೂ ಪಾಲಿಕೆಯ ಅಧಿಕಾರಿಗಳು/ನೌಕರರಿಗೆ ಸ್ವಾಗತಕೋರಿದರು.

- **ಹಿಂದಿನ ವಾರ್ಡ್ ಸಮಿತಿ ಸಭೆಯಲ್ಲಿ ಚರ್ಚಿಸಿದ ಸಮಸ್ಯೆಗಳಿಗೆ ಕೈಗೊಂಡ ಕ್ರಮಗಳ ಬಗ್ಗೆ**
  - ಖಾಲಿ ಇರುವ ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿಗೆ ಕಂದಾಯ ಅಧಿಕಾರಿ ರವರ ಕಛೇರಿಯನ್ನು ಸ್ಥಳಾಂತರಿಸುವ ಬಗ್ಗೆ: ಹೇಮಂತ್ಕುಮಾರ್ ಎಸ್.ಕೆ ಸಹಾಯಕ ಅಭಿಯಂತರರು, ವಾರ್ಡ್ ನಂ.70 ರವರು ಮಾತನಾಡಿ, ಈಗಾಗಲೇ ಈ ಹಿಂದೆ ಇದ್ದ ಸಹಾಯಕ ಕಾರ್ಯಪಾಕ ಅಭಿಯಂತರರ ಕಛೇರಿಯನ್ನು ಸ್ಥಳಾಂತರಿಸಿದ್ದು, ಬಣ್ಣ ಬಳಿಯುವ ಕೆಲಸ ಬಾಕಿಯಲ್ಲಿದೆ, ಮುಂದಿನ ವಾರ ಸ್ಥಳಾಂತರಿಸಲು ಸ್ಥಳಾವಕಾಶ ಒದಗಿಸಿ ಕೊಡಲಾಗುವುದೆಂದು ತಿಳಿಸಿದರು.
  - ಜಿ.ಕೆ.ಡಬ್ಲ್ಯೂ ಲೇಔಟ್ ಪಾರ್ಕ್ ಬಳಿ ವಿದ್ಯುತ್ ಕೇಬಲ್ ಕಟ್ಆಗಿದ್ದರ ಬಗ್ಗೆ ಬೆಸ್ಕಾಂ ಅಧಿಕಾರಿಗಳು ಸ್ಥಳಪರಿವೀಕ್ಷಣೆ ಮಾಡಿದ್ದು, ಶೀಘ್ರದಲ್ಲಿ ಕ್ರಮವಹಿಸಲಾಗುವುದೆಂದು ತಿಳಿಸಿರುತ್ತಾರೆ ಎಂದು ಗಿರೀಶ್, ಗುತ್ತಿಗೆದಾರರು, ಬೀದಿ ದೀಪಗಳ ನಿರ್ವಹಣೆ ರವರು ಸಭೆಗೆ ತಿಳಿಸಿದರು.

- **ಸ್ವಚ್ಛತೆ ಮತ್ತು ಘನ ತ್ಯಾಜ್ಯ ನಿರ್ವಹಣೆ ಬಗ್ಗೆ:**
  - ಶಿವಲಿಂಗಯ್ಯ.ಕೆ, ಹಿರಿಯಆರೋಗ್ಯ ಪರಿವೀಕ್ಷಕರು, ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿರುವ ಶಾಲೆಗಳು ಪುನರಾರಂಭವಾಗಿದ್ದು, ಇಲ್ಲಿಯವರೆಗೆ ಸ್ಯಾನಿಟೈಸ್ ಮಾಡಲು ಮನವಿ ಮಾಡಿದ್ದ ಈ ಕೆಳಕಂಡ ಶಾಲೆಗಳಲ್ಲಿ ಸ್ಯಾನಿಟೈಸ್ ಮಾಡಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.
    ಸದರಿ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ | ಶಾಲೆಯ ಹೆಸರು & ವಿಳಾಸ |
|---|---|
| 1 | ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಪಾಠಶಾಲೆ, ಕರೀಂಸಾಬ್ ಲೇಔಟ್ |
| 2 | ವಿದ್ಯಾಸಂಸ್ಕೃತಿ ಇಂಟರ್ ನ್ಯಾಷನಲ್ ಸ್ಕೂಲ್, ಹೆಗ್ಗನಹಳ್ಳಿ |
| 3 | ಎಂ.ಇ.ಎಸ್.ಸ್ಕೂಲ್, ಪೀಣ್ಯ 2ನೇ ಹಂತ |
| 4 | ಆರ್.ವಿ.ಇಂಗ್ಲೀಷ್ ಸ್ಕೂಲ್, ರಾಜಗೋಪಾಲ ನಗರ |
| 5 | ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ, ರಾಜಗೋಪಾಲ ನಗರ |
| 6 | ಇಂಚರ ಪಬ್ಲಿಕ್ ಸ್ಕೂಲ್, ಶ್ರೀಗಂಧ ನಗರ |
| 7 | ಎಸ್.ಎಲ್.ಎಸ್ ಅನುದಾನಿತ ಕನ್ನಡ ಹಿರಿಯ ಪ್ರಾಥಮಿಕ ಪಾಠಶಾಲೆ, ದೊಡ್ಡಣ್ಣ ಎಸ್ಟೇಟ್ |
| 8 | ಸರ್ವೋದಯ ವಿನೋಭಾ ಪ್ರೌಢಶಾಲೆ, ಪೀಣ್ಯ 2ನೇ ಹಂತ |

  - ಶ್ರೀಮತಿ ಕಮಲ ಹೆಚ್,ನೋಡಲ್ ಅಧಿಕಾರಿ ವಾರ್ಡ್ 70ರವರು ಕೈಗಾರಿಕ ಪ್ರದೇಶಗಳಲ್ಲಿ ಕಸ ಸಂಗ್ರಹಣೆಯನ್ನು ಯಾವ ರೀತಿಯಲ್ಲಿ ನಿರ್ವಹಿಸಲಾಗುತ್ತಿದೆ ಎಂದು ವಿಚಾರಿಸಲಾಗೀ,
    ತ್ರೀವೇಣಿ, ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.70 ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿ ಬರುವ ಕೈಗಾರಿಕ ಪ್ರದೇಶವಾದ ದೊಡ್ಡಣ್ಣ ಕೈಗಾರಿಕಾ ಪ್ರದೇಶದಲ್ಲಿ ಕಸವನ್ನು ಸಂಗ್ರಹಿಸಲು ಪ್ರತಿನಿತ್ಯವು ನಿಯೋಜಿಸಿರುವ ಆಟೋಗಳು ಹಾಗೂ ಇನ್ನಿತರ ವಿವರಗಳನ್ನು ಸಭೆಗೆ ನೀಡಿದರು.
    ಸದರಿ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ | ಬ್ಲಾಕ್ ಸಂಖ್ಯೆ | ಒಟ್ಟು ವಸತಿ ಮನೆಗಳು | ಒಟ್ಟು ಕೈಗಾರಿಕೆಗಳು | ನಿಯೋಜಿಸಿರುವ ವಾಹನ ಸಂಖ್ಯೆ | ನಿಯೋಜಿತ ಸಮಯ | |
|---|---|---|---|---|---|---|
| | | | | | ಒಣಕಸ | ಹಸಿಕಸ |
| 1 | 30 | 530 | 183 | KA 04 AB 4608 | 7.00AM to 9.00 AM | 10.00 AM to 1.00 PM |
| 2 | 12 | 10 | 70 | KA 41 C 9373 | | |
| 3 | 16 | 480 | 189 | KA 41 C 9377 | | |
| 4 | 3 | 800 | 60 | KA 07 8057 | | |
| 5 | 13 | 150 | 80 | KA 41 C 5069 | | |
| 6 | 22 | 490 | 15 | KA 01 AK 2899 | | |

- **ಕೋವಿಡ್-19, ಸಾಂಕ್ರಾಮಿಕರೋಗದ ಬಗ್ಗೆ**
  - ಶಿವಲಿಂಗಯ್ಯ.ಕೆ, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.70ರವರು ಮಾತಾನಾಡಿ ವಾರ್ಡ್ 70ರ ವ್ಯಾಪ್ತಿಯಲ್ಲಿ ದಿನಾಂಕ:06/12/2020 ರಿಂದ31/12/2020 ರವರೆಗೆ ಮಾಸ್ಕ್ ಧರಿಸದವರಿಂದ ರೂ.20750/-ಗಳ ದಂಡವನ್ನು ಸಂಗ್ರಹಿಸಲಾಗಿದೆ ಹಾಗೂ ಮಾಸ್ಕ್ ಧರಿಸಲು ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗಿದೆ ಎಂದು ತಿಳಿಸಿದರು.

- ರಸ್ತೆ ಗುಂಡಿಗಳ ನಿರ್ವಹಣೆ ಬಗ್ಗೆ

  - ಹೇಮಂತ್‌ಕುಮಾರ್ ಎಸ್.ಕೆ ಸಹಾಯಕ ಅಭಿಯಂತರರು, ವಾರ್ಡ್ ನಂ.70 ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಬಿದ್ದಿರುವ ರಸ್ತೆಗುಂಡಿಗಳನ್ನು ಪಟ್ಟಿ ಮಾಡಿಕೊಂಡು ವೆಟ್ ಮಿಕ್ಸ್ ಅಳವಡಿಸಲಾಗಿದೆ. ಅಂದಾಜು 93 ಟನ್‌ಗಳಷ್ಟು ಡಾಂಬರು ಮಿಕ್ಸು ಬೇಕಾಗಿರುತ್ತದೆ ಎಂದು ತಿಳಿಸಿದರು.

- ಇನ್ನಿತರ ಸಮಸ್ಯೆಗಳ ಬಗ್ಗೆ:

  BBMP SAHAYA APP:

  - ಹೇಮಂತ್‌ಕುಮಾರ್‌ಎಸ್.ಕೆ ಸಹಾಯಕ ಅಭಿಯಂತರರು, ವಾರ್ಡ್ ನಂ.70 ಮಾತನಾಡಿ ನಮ್ಮ ಇಲಾಖೆಗೆ ಸಂಬಂಧಪಟ್ಟ ದೂರುಗಳಿಗೆ ಶೀಘ್ರಗತಿಯಲ್ಲಿ ಪರಿಹಾರಕ್ರಮ ಕೈಗೊಳ್ಳುತ್ತಿದ್ದು, ಯಾವುದೇ ಸಮಸ್ಯೆಗಳು ಬಾಕಿ ಇರುವುದಿಲ್ಲ ಎಂದು ತಿಳಿಸಿದರು.
  - ತ್ರೀವೇಣಿ, ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ಘನ ತ್ಯಾಜ್ಯ ನಿರ್ವಹಣೆಗೆ ಸಂಬಂಧಪಟ್ಟ ದೂರುಗಳನ್ನು ಪರಿಹರಿಸಲಾಗಿದೆ ಹಾಗೂ ಯಾವುದೇ ಬಾಕಿ ಇರುವುದಿಲ್ಲ ಎಂದು ತಿಳಿಸಿದರು.

- ಕೊನೆಯದಾಗಿ ಮಾನ್ಯ ನೋಡಲ್‌ಅಧಿಕಾರಿರವರುಸಭೆಗೆ ಹಾಜರಾದ ಎಲ್ಲಾಅಧಿಕಾರಿ/ನೌಕರರಿಗೆ ವಂದನೆಯನ್ನು ತಿಳಿಸುತ್ತಾ ಇನ್ನು ಮುಂದೆಯೂ ಈ ಸಭೆಗಳಲ್ಲಿ ಪೂರ್ವತಯಾರಿಯೊಂದಿಗೆ ಪಾಲ್ಗೊಂಡು ವಾರ್ಡಿನ ಕುಂದುಕೊರತೆಗಳತ್ತ ಗಮನಹರಿಸಿ ವಾರ್ಡ್ ಅಭಿವೃದ್ಧಿ ಪಡಿಸಲು ಸಹಕಾರ ನೀಡಬೇಕೆಂದು ಮನವಿ ಮಾಡಿದರು.
- ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರಾದಶ್ರೀ ಹೇಮಂತ್‌ಕುಮಾರ್ ಎಸ್ ಕೆ ರವರು ಸಭೆಗೆ ಹಾಜರಾದ ಎಲ್ಲಾ ಅಧಿಕಾರಿಗಳು/ನೌಕರರಿಗೂ ವಂದನೆಯನ್ನು ತಿಳಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

11/01/2021 | HKamala. 11.1.2021
--- | ---
ಸದಸ್ಯ ಕಾರ್ಯದರ್ಶಿ–ವಾರ್ಡ್ 70 ಹಾಗೂ ಸಹಾಯಕ ಅಭಿಯಂತರರು, | (ಕಮಲ ಹೆಚ್) ನೋಡಲ್ ಅಧಿಕಾರಿ ವಾರ್ಡ್–70

ಪ್ರತಿಯನ್ನು:

1) ಜಂಟಿ ಆಯುಕ್ತರು, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
2) ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ ವಿಭಾಗ) ರವರ ಮಾಹಿತಿಗಾಗಿ ಕಳುಹಿಸಿದೆ.
3) ಸಹಾಯಕ ಕಾರ್ಯಪಾಲಕ ಅಭಿಯಂತರರು (ಹೆಗ್ಗನಹಳ್ಳಿ) ರವರ ಮಾಹಿತಿಗಾಗಿ ಕಳುಹಿಸಿದೆ.
4) ಸಹಾಯಕ ಕಂದಾಯ ಅಧಿಕಾರಿ (ಹೆಗ್ಗನಹಳ್ಳಿ) ರವರ ಮಾಹಿತಿಗಾಗಿ ಕಳುಹಿಸಿದೆ.
5) ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.70 ರವರ ಮಾಹಿತಿಗಾಗಿ
6) ಸಹಾಯಕ ಅಭಿಯಂತರರು (ವಿದ್ಯುತ್ ಬೆಸ್ಕಾಂ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
7) ಸಹಾಯಕ ಅಭಿಯಂತರರು (ವಿದ್ಯುತ್ (ಬೀದಿದೀಪ) ಬಿಬಿಎಂಪಿ ರವರ ಮಾಹಿತಿಗಾಗಿ ಸೂಕ್ತ ಕ್ರಮಕ್ಕಾಗಿ
8) ಕಛೇರಿ ಕಡತಕ್ಕೆ